ನಿರಾಶೆಯಾಗತೊಡಗಿತು. ಈ ಮಹಾಕಾವ್ಯದ ಬಗ್ಗೆ ಯಾರೂ ಮಾತಾಡುತ್ತಿಲ್ಲವಲ್ಲ ಎಂದು ಚಡಪಡಿಸಿದರು. ಅದೇ ಹೊತ್ತಿಗೆ ಕಲಬುರಗಿಯಲ್ಲಿ ಉಪಚುನಾವಣೆಯ ಪ್ರಚಾರ ರಂಗೇರಿತ್ತು. ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಂದು ಕಲಬುರಗಿಯ ಬೀದಿಬೀದಿಗಳಲ್ಲಿ ಪ್ರಚಾರ ಮಾಡುತ್ತ ಅಲೆಯುತ್ತಿದ್ದರು. ಅವರು ಪ್ರಚಾರ ಮಾಡುತ್ತಾ ಅಚಾನಕ್ಕಾಗಿ ಪುಸ್ತಕ ಬಿಡುಗಡೆಯ ಸಮಾರಂಭಕ್ಕೆ ಬಂದುಬಿಟ್ಟರು. ಇನ್ನು ನಾಡಿನ ಮುಖ್ಯಮಂತ್ರಿ ಬಂದರೆ ಜನ ಸುಮ್ಮನಿರುತ್ತಾರೆಯೆ. ಅವರಿಗೂ ವೇದಿಕೆಯ ಮೇಲೆ ಕುರ್ಚಿ ಹಾಕಲಾಯಿತು. ಅವರ ಜೊತೆ ಇದ್ದ ಮಂತ್ರಿಗಳು ಕೂಡ ಕುರ್ಚಿ ಪಡೆಯಲು ಪೇಚಾಡಿದರು. ವೇದಿಕೆಯ ಮೇಲೆ ಮುಖ್ಯಮಂತ್ರಿ, ಸಚಿವ ಮಂಡಳಿಯನ್ನು ಕಂಡು ವಾಲೀಕಾರರು ದಿಕ್ಕುತೋಚದೆ ನಿಂತಿದ್ದರು. ನಾನು ಕೂಡ ವೇದಿಕೆಯ ಮೇಲಿದ್ದೆ. ಸಭೆಯಲ್ಲಿ ಯಾರೋ ಒಬ್ಬರು ಮಹಾಕಾವ್ಯದ ಪ್ರತಿಯನ್ನು ಯಡಿಯೂರಪ್ಪನವರ ಮುಂದಿಟ್ಟರು. ಈ ಸಾವಿರ ಪುಟದ ಪುಸ್ತಕವನ್ನವರು ತೆರೆದರು. ಅವರಿಗೇನೂ ತಿಳಿಯಲಿಲ್ಲ. ಅನೇಕ ಪುಟಗಳನ್ನು ಸರಿಸಿದರು. ಊಹುಂ ಏನೂ ತಿಳಿಯುತ್ತಿಲ್ಲ. ಮಹಾಕಾವ್ಯವನ್ನು ಹೊರಳಿಸಿ ನೋಡಿದರು. ಮತ್ತದೇ ಅಕ್ಷರಗಳ ಮಹಾಪೂರ. ಅಂದಿನ ಚುನಾವಣಾ ಅಭ್ಯರ್ಥಿ ವಿಧಾನ ಪರಿಷತ್ತಿನ ಸದಸ್ಯ ಶಶಿಲ್ ಜಿ ನಮೋಶಿ ಅವರನ್ನು ಕೇಳಿದರು; ಇಲ್ಲಿ ಏನು ನಡೆಯುತ್ತಿದೆ ಅನ್ನುವ ಅರ್ಥದಲ್ಲಿ. ಅದಕ್ಕವರು 'ಸರ್ ಪುಸ್ತಕ ಬಿಡುಗಡೆ, ಖ್ಯಾತ ಬಂಡಾಯ ಲೇಖಕ ಚೆನ್ನಣ್ಣ ವಾಲೀಕಾರ್...' ಅಂತ ಹೇಳುವಷ್ಟರಲ್ಲಿ ಯಡಿಯೂರಪ್ಪನವರು ಕೈ ಅಡ್ಡಮಾಡಿ ಸಾಕೆಂದರು. ಸಭೆಯನ್ನು ನಿರೂಪಿಸುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಂದಿನ ಜಿಲ್ಲಾಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡಬೇಕೆಂದು ಘೋಷಿಸಿಯೇಬಿಟ್ಟರು. ಪುಸ್ತಕ ಹಿಡಿದಕೊಂಡು ಬಂದ ಯಡಿಯೂರಪ್ಪನವರು ಅದನ್ನು ಪೋಡಿಯಂ ಮೇಲೆ ಇಟ್ಟು ಮಾತಿಗೆ ನಿಂತರು 'ಈ ಪುಸ್ತಕದಲ್ಲಿ ನಮ್ಮ ನಿಮ್ಮ ಬದುಕಿದೆ. ಇದರಲ್ಲಿ ರೈತನ ಗೋಳಿದೆ, ಕಾರ್ಮಿಕರ ಬೆವರಿದೆ, ಬಡವರ ಬವಣೆಯಿದೆ. ವರ್ಷಗಟ್ಟಲೆ ಹೊಲದಲ್ಲಿ ದುಡಿದರೂ ಒಂದು ಹೊತ್ತಿನ ಊಟಕ್ಕಾಗಿ ರೈತ ಕಷ್ಟಪಡಬೇಕಾಗಿದೆ. ಶ್ರೀಮಂತರ ಮನೆ ಬಾಗಿಲು ಕಾಯುವುದರಲ್ಲೇ ಬಡವರ ಜೀವನ ಕಳೆದು ಹೋಗುತ್ತಿದೆ. ನಮ್ಮ ನಾಡಿನ ಜನತೆ ಸ್ವಾಭಿಮಾನದ ಬದುಕು ಬದುಕಬಾರದೇನು? ಇದಕ್ಕೆಲ್ಲ ಯಾರು ಕಾರಣ? ಇಲ್ಲಿನ ಬಡವರ ದಲಿತರ ರೈತರ ಮಹಿಳೆಯರ ಕಷ್ಟವನ್ನು ವರ್ಣಿಸಲಿಕ್ಕೆ ಸಾವಿರ ಪುಟಗಳಾದರೂ ಸಾಲುವುದಿಲ್ಲ. ಆದರೆ ಇಂಥ ಸವಾಲನ್ನು ಚೆನ್ನಣ್ಣ ವಾಲೀಕಾರರು ಸ್ವೀಕರಿಸಿದ್ದಾರೆ. ಇಂಥ ಕೃತಿಯನ್ನು ರಚಿಸಿದ್ದಕ್ಕಾಗಿ ನಾನು ನಾಡಿನ ಆರು ಕೋಟಿ ಜನತೆಯ ಪರವಾಗಿ ಪ್ರಸಿದ್ಧ ಬಂಡಾಯ ಲೇಖಕ ಚೆನ್ನಣ್ಣ ವಾಲೀಕಾರರನ್ನು ಅಭಿನಂದಿಸುತ್ತೇನೆ' ಎಂದರು. ಸಭಾಂಗಣದಲ್ಲಿ ಕರತಾಡನ ಮುಗಿಲು ಮುಟ್ಟಿತ್ತು. ಯಡಿಯೂರಪ್ಪ ಮಾತು ಮುಂದುವರೆಸಿದರು. ರಾಜ್ಯದಲ್ಲಿನ ಬರಗಾಲ, ಕಾಂಗ್ರೆಸ್ ಪಕ್ಷದ ಬೇಜವಾಬ್ದಾರಿ, ಹೋರಾಟದ ಕೆಚ್ಚು ಕಳೆದುಕೊಳ್ಳುತ್ತಿರುವ ಯುವಜನತೆ, ಬಸವಣ್ಣನವರ ಚಳವಳಿ, ರೈತರ ಏಳಿಗೆಗೆ ತಮ್ಮ ಸರ್ಕಾರ ಹಾಕಿಕೊಂಡ ಯೋಜನೆಗಳು, ಹಲವಾರು ಸಂಗತಿಗಳನ್ನು ಬಿಚ್ಚಿಟ್ಟರು. ಅರ್ಧ ಗಂಟೆ ಮಾತನಾಡಿದರು. ಕೊನೆಯಲ್ಲಿ ಈ ಕೃತಿ ನಾಡಿನ ಮೂಲೆಮೂಲೆಗೆ ತಲುಪಬೇಕು. ಹಾಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಹೆಗಲ ಮೇಲಿದೆ. ಭ್ರಷ್ಟ ವಾತಾವರಣದಲ್ಲಿ ಇಂಥ ಕೃತಿಗಳು ಮಾತ್ರ ಆಶಾಕಿರಣ. ಈ ಸಮಾರಂಭದಲ್ಲಿ ಭಾಗವಹಿಸಿದ್ದಕ್ಕೆ ತಮ್ಮ ಜನ್ಮ ಸಾರ್ಥಕವಾಯಿತೆಂದರು. ಮತ್ತೆ ಮುಗಿಲುಮುಟ್ಟಿದ ಕರತಾಡನ. ಅವರು ಚೆನ್ನಣ್ಣ ವಾಲೀಕಾರರ ಬಳಿಗೆ ಬಂದು ಕೈಕುಲುಕಿ ಏನೋ ಮಾತನಾಡಿದರು. ಜನತೆ ಯಡಿಯೂರಪ್ಪನವರಿಗೂ ಚೆನ್ನಣ್ಣ ವಾಲೀಕಾರರಿಗೂ ಜಯಘೋಷ ಹಾಕಿತು. ಮುಖ್ಯಮಂತ್ರಿಗಳು ಹೋದಮೇಲೆ ಇಡೀ ಸಭಾಂಗಣ ಅವರನ್ನು ಹಿಂಬಾಲಿಸಿ ಹೊರನಡೆಯಿತು. ಸಭಾಂಗಣ ಖಾಲಿ. ಏನಾಯಿತು ಎಂಬುದು ತಿಳಿಯದೆ ವಾಲೀಕಾರರು ಖಾಲಿ ಸಭಾಂಗಣ ನೋಡುತ್ತ ಕುರ್ಚಿಯಲ್ಲಿ ಕೂತಿದ್ದರು. ಗುರುಗಳು ನನ್ನ ಕೈಹಿಡಿದುಕೊಂಡು ಸಭಾಂಗಣದಿಂದ ಹೊರನಡೆದರು.

ವಾಲೀಕಾರರು 'ವ್ಯೋಮಾವ್ಯೋಮ' ಕೃತಿಯನ್ನು ನಾಡಿನೆಲ್ಲೆಡೆ ಬಿಡುಗಡೆಗೊಳಿಸುವ ಉತ್ಸಾಹದಲ್ಲಿದ್ದರು. ಮುಂದೆ ಧಾರವಾಡ, ರಾಯಚೂರು ಹೀಗೆ ಹಲವು ನಗರಗಳಲ್ಲಿ ಕೃತಿ ಬಿಡುಗಡೆಗೊಂಡಿತು. ಸಾವಿರಾರು